2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 2184 ಃ 2020

**ಪಿ ಡಬ್ಲ್ಯೂ** 3

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 16.09.2025

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಪಿ ವಕೀಲರಿಂದಃ

ಪಿರ್ಯಾದುದಾರರು ಯಾವ ಸಮಯಕ್ಕೆ ಪೊಲೀಸ್ ಠಾಣೆಗೆ ಬಂದಿದ್ದರು ಎಂದು ಈಗ ನನಗೆ ನೆನಪಿಲ್ಲ. ಪ್ರ ವ ವರದಿಯನ್ನು ಹಾಕುವ ಪೂರ್ವದಲ್ಲಿ ನಾನು ಘಟನಾ ಸ್ಥಳಕ್ಕೆ ಹೋಗಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಕೇವಲ ಪಿರ್ಯಾದಿಯ ಮೇಲೆ ಪ್ರ ವ ವರದಿಯನ್ನು ನೊಂದಣಿ ಮಾಡಿದ್ದೇನೆ ಎಂದರೆ ಸರಿ. ಪಿರ್ಯಾದುದಾರರು ಸ್ವತಃ ಬೆರಳಚ್ಚು ಮಾಡಿಕೊಂಡು ಪಿರ್ಯಾದನ್ನು ನೀಡಿರುತ್ತಾರೆ. ಪಿರ್ಯಾದುದಾರರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಪಿರ್ಯಾದುದಾರರು ಪಿರ್ಯಾದಿ ಕೊಟ್ಟ ನಂತರ ಆರೋಪಿ ಮತ್ತು ಅವರ ಮಧ್ಯೆ ಏನಾದರೂ ವ್ಯವಹಾರ ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಮಹಜರ್ ಮಾಡುವ ಪೂರ್ವದಲ್ಲಿ ಪಂಚರಿಗೆ ನಾನು ಯಾವುದೇ ನೋಟೀಸ್ ಕೊಟ್ಟಿದ್ದು ಇರುವುದಿಲ್ಲ. ಪಂಚರು ಜಾಗದಲ್ಲಿ ಇದ್ದಿದ್ದು ಅವರನ್ನು ನಾನು ಪಂಚರನ್ನಾಗಿ ಮಾಡಿಕೊಂಡಿರುತ್ತೇನೆ. ನಾನು ಯಾವುದೇ ಸಿ ಸಿ ಟಿವಿ ಪುಟೇಜ್ ಅನ್ನು ಮಹಜರ್ ಮಾಡುವ ಸಮಯದಲ್ಲಿ ಪಡೆದುಕೊಂಡಿರುವುದಿಲ್ಲ. ಘಟನಾ ಸ್ಥಳದ ನಕಾಶೆಯನ್ನು ತೆಗೆದಿದ್ದು ಇರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿದ್ದು ಇರುವುದಿಲ್ಲ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಪಿರ್ಯಾದಿ ನೊಂದಣಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ